# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 270/**19** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | **ನದೀಮ್ ಅಹಮ್ಮದ್** | |
| ತಂದೆಯ ಹೆಸರು | **ನಿಸಾರ ಅಹಮ್ಮದ್** | ಸಾಕ್ಷಿಗೆ ದಿಃ **11.10.2021** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **34** ವರ್ಷ | |
| ಉದ್ಯೋಗ | ಕಾರ ಚಾಲಕ | ಪಿ.ಡಬ್ಲ್ಯೂ **-02** |
| ವಾಸ ಸ್ಥಳ | ಕ್ಯಾತಮಾರನಹಳ್ಳಿ, ಮೈಸೂರು | ಸಿ.ಡಬ್ಲ್ಯೂ **-02** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಸ್ಥಳದ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಶವದ ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-3 ಎಂದು, ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆಗಳ ಕಾಲಕ್ಕೆ ಪೊಲೀಸರು ಕೊಟ್ಟಿ ನೋಟಿಸ್ಸನ್ನು ನಿಪಿ-4 ಎಂದು ಗುರುತಿಸಲಾಯಿತು. ಮೃತ ರೇಷ್ಮಾ ಭಾನು ಇವರ ತಮ್ಮ ನನಗೆ ಗೆಳೆಯನಾಗಬೇಕು. ಆತನು ಕರೆದಿದ್ದರಿಂದ ನಾನು ಸ್ಥಳಕ್ಕೆ ಹೋಗಿದ್ದೆನು. ಅವಳ ಕುತ್ತಿಗೆ ಮತ್ತು ಪಕ್ಕೆಯ ಮೇಲೆ ಗಾಯವಾಗಿತ್ತು. ಪಂಚನಾಮೆಗಳನ್ನು ಪೊಲೀಸರು ಬರೆದು ಸಹಿ ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ನಯಾಜ್ ಶರೀಫ್ ಈತನ ಪರಿಚಯ ಇರುತ್ತದೆ. ಆತನು ಕೂಡಾ ಪಂಚನಾಮೆಯ ಕಾಲಕ್ಕೆ ಹಾಜರು ಇದ್ದನು. ಸಾಕ್ಷಿಯು ನಯಾಜ್ ಶರೀಫ್ ಈತನ ಸಹಿಗಳನ್ನು ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-2 ಸಿ ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳದ ಪಂಚನಾಮೆಯನ್ನು ದಿಃ

25.07.2019 ರಂದು ಮಾಡಿರುತ್ತಾರೆ. ಶವದ ಪಂಚನಾಮೆಯನ್ನು ಅದೇ ದಿನ 25.07.2019 ರಂದು ಸಂಜೆ 3.00 ರಿಂದ 5.00 ಗಂಟೆಯ ವರೆಗೆ ಮಾಡಿರುತ್ತಾರೆ. ಸ್ಥಳ ಪಂಚನಾಮೆಯ ಕಾಲಕ್ಕೆ ಯಾವುದೇ ವಸ್ತುವನ್ನು ಜಪ್ತಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ 25.07.2019 ರಂದು ಪೊಲೀಸರ ಶವ ಪಂಚನಾಮೆಯನ್ನು 3.15 ಗಂಟೆಯಿಂದ 5.15 ಗಂಟೆಯ ವರೆಗೆ ಮನೆಯಲ್ಲೇ ಮಾಡಿರುತ್ತಾರೆ. ಸದರಿ ಶವದ ಪಂಚನಾಮೆಯನ್ನು ಎಮ್.ಸಿ.ಸಿ ಕಾಲೋನಿಯ ಗಾಯತ್ರಿಪುರಂ ಡೋರ್ ನಂಬರ್ 31 ರ ಮನೆಯಲ್ಲೇ ಶವದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ ಇದೆ. ನಂತರ ಅದೇ ದಿನ ದಿಃ 25.07.2019 ಸಂಜೆ 5.20 ರಿಂದ 6.00 ಗಂಟೆಯ ವರೆಗೆ ಸ್ಥಳದ ಪಂಚನಾಮೆಯನ್ನು ಪೊಲೀಸರು ಮಾಡಿದ್ದಾರೆ ಎಂದರೆ ನಾನು ಅಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ರಕ್ತದ ಮಾದರಿ ಸ್ವಾಬ್ ಪೊಲೀಸರು ಜಪ್ತಿ ಮಾಡಿದ್ದಾರೆ ಎಂದರೆ ನಾನು ಅಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ನಿಶಾನೆ ಎಂದು ಗುರುತಿಸಲು ಮಾನ್ಯ ಸರ್ಕಾರಿ ಅಭೀಯೊಜಕರು ಕೇಳಿಕೊಂಡಾಗ, ಆರೋಪಿ ಪರ ವಕೀಲರು ಸಿ.ಡಿ ಹಾಜರುಪಡಿಸಿಲ್ಲ, ನಿಶಾನೆ ಎಂದು ಗುರುತಿಸಬಾರದು ಎಂದು ತಕರಾರು ಸಲ್ಲಿಸಿರುತ್ತಾರೆ, ಸದರಿ ಮೂರು ಪೋಟೋಗಳು ಶವದ ಪೋಟೋಗಳು ಇದ್ದು, ಸದರಿ ಶವದ ಪೋಟೋಗಳು ಶವದ ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋಗಳು ಇವೆ ಎಂದು ಸಾಕ್ಷಿಯು ಗುರುತಿಸಿದ್ದರಿಂದ ತಕರಾರು

ತಳ್ಳಿಹಾಕಿ ನಿಪಿ-5 ರಿಂದ ನಿಪಿ-7 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಪೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು